MAY 15, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಅಂತರ್ಜಲ ಸ್ಥಿರಾಸ್ತಿ; ಜಲ ಚತುರ ಕೃಷಿ ಇಂದಿನ ಆದ್ಯತೆ – ಐ.ಸಿ.ಎ.ಆರ್. ನಿರ್ದೇಶಕ, ಚಿ.ಶ್ರೀನಿವಾಸ ರಾವ್.**
- **ಕನ್ನಡ ಭಾಷೆ ಪರೀಕ್ಷೆ; 10ನೇ ತರಗತಿ ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳು ಅನುತ್ತೀರ್ಣ; ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ, ಪರಿಶೀಲನೆ.**
- **ವರಕವಿ ಬೇಂದ್ರೆ ನಿವಾಸ, 'ಶ್ರೀ ಮಾತಾ'ದ, ರೇಖಾಚಿತ್ರಿತ ಶಾಶ್ವತ ಅಂಚೆ ರದ್ದತಿ ಮುದ್ರೆ, ಬಿಡುಗಡೆ.**
- **108 ಆಂಬ್ಯುಲೆನ್ಸ್ ಸೇವೆ; ಜೂನ್ ತಿಂಗಳಿನಿಂದ, ರಾಜ್ಯ ಸರ್ಕಾರವೇ ನಿರ್ವಹಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಕೃಷಿ ಶಿಕ್ಷಣ, ಗ್ರಾಮೀಣರ ಜೀವನಮಟ್ಟ ಸುಧಾರಣೆಯತ್ತ, ಪ್ರಾಶಸ್ತ್ಯ ಕೇಂದ್ರೀಕರಿಸಬೇಕು; ಅಂತರ್ಜಲ ಒಂದು ಸ್ಥಿರಾಸ್ತಿ, ಜಲ ಚತುರ ಕೃಷಿ ಇಂದಿನ ಆದ್ಯತೆಯಾಗಬೇಕೆಂದು ಎಂದು, ಹೊಸ ದಿಲ್ಲಿಯ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ನಿರ್ದೇಶಕ ಚಿ.ಶ್ರೀನಿವಾಸ ರಾವ್, ಹೇಳಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ, 38ನೇ ಘಟಿಕೋತ್ಸವದಲ್ಲಿ, ಅವರು ದಿಕ್ಸೂಚಿ ಭಾಷಣ ಮಾಡಿದರು. ಕರ್ನಾಟಕದಲ್ಲಿ, ಅಂದಾಜು 80 ಲಕ್ಷ ಭೂ ಒಡೆಯರಿದ್ದಾರೆ. ಆ ಪೈಕಿ, ಶೇಕಡ 90ರಷ್ಟು ಜನ, ಸಣ್ಣ ಹಾಗೂ ಮಧ್ಯಮ ವರ್ಗದ ರೈತರಾಗಿದ್ದಾರೆ. ಸರಿ ಸುಮಾರು 128 ಲಕ್ಷ ಹೆಕ್ಟರ್ ಕೃಷಿ ಭೂಮಿ ಇದ್ದು, 40 ಲಕ್ಷ ಹೆಕ್ಟರ್ ಭೂಮಿ ನೀರಾವರಿಗೆ ಒಳಪಟ್ಟಿದೆ. 21 ಲಕ್ಷ ಹೆಕ್ಟರ್ ಬಹು ಬೆಳೆ ಬೆಳೆಯುವ ಭೂಮಿ ಇದೆ, ಎಂದರು.**

<><><>

**ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹಾಗೂ ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ, ಪ್ರಯೋಗಶೀಲ ಕೃಷಿಕರಾದ, ಮುತ್ತಣ್ಣ ಪೂಜಾರ, ದ್ಯಾಮನಗೌಡ ಪಾಟೀಲ ಹಾಗೂ ಶಂಕರ ಲಂಗಟಿ ಅವರಿಗೆ, ಗೌರವ ಡಾಕ್ಟರೆಟ್ ಪ್ರದಾನಿಸಿ, ಗೌರವಿಸಿದರು.**

<><><>

**ವಿದ್ಯಾರ್ಥಿನಿ ಐಶ್ವರ್ಯ ಬೆಟಗೇರಿ ಹಾಗೂ ಕಾರ್ತಿಕ ಚಿಗರಿ, ನಾಲ್ಕು ಚಿನ್ನದ ಪದಕಗಳೊಂದಿಗೆ, ಸ್ನಾತಕ ಕೃಷಿ ಪದವಿ ಪಡೆದರು. ಪ್ರದೇಶ ಸಮಾಚಾರಕ್ಕಾಗಿ ಕಾರ್ತಿಕ್ ತಮ್ಮ, ಸಂತಸ ಹಂಚಿಕೊಂಡಿದ್ದಾರೆ.**

<><><>

ಕಾರ್ತಿಕ ಚಿಗರಿ ಧ್ವನಿ 28 ಸೆಕೆಂದುಗಳು

<><><>

ಕೃಷಿ ಕ್ಷೇತ್ರದ ಅಭಿವೃದ್ಧಿಗೆ, ಕೃತಕ ಬುದ್ಧಿಮತ್ತೆಯನ್ನು, ವ್ಯಾಪಕವಾಗಿ ಬಳಸುವ ಉದ್ದೇಶ ಹೊಂದಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಧಾರವಾಡದ, ಜಂಟಿ ಕೃಷಿ ನಿರ್ದೇಶಕರ ಕಚೇರಿ ಆವರಣದಲ್ಲಿ, ನೂತನವಾಗಿ ನಿರ್ಮಿಸಿದ, 'ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ' ಕೇಂದ್ರ ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ನೂತನ ಕಟ್ಟಡ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ, ಜೈವಿಕ ಗೊಬ್ಬರ ಗುಣ ನಿಯಂತ್ರಣ ಪ್ರಯೋಗಾಲಯವನ್ನು ಉದ್ಘಾಟಿಸಿ, ಮಾತನಾಡಿದರು. ಕೃತಕ ಬುದ್ಧಿಮತ್ತೆ ಕೇಂದ್ರದ ಕಟ್ಟಡವನ್ನು, 3 ಕೋಟಿ 75 ಲಕ್ಷ ರೂಪಾಯಿ ವೆಚ್ಚದಲ್ಲಿ  ನಿರ್ಮಿಸಲಾಗಿದೆ. ವಿವಿಧ ಕ್ಷೇತ್ರಗಳ ಜ್ಞಾನವನ್ನು ಬಳಸಿ, ಉತ್ಪಾದನಾ ಪದ್ಧತಿ, ಇಳುವರಿ ಸುಧಾರಣೆಗೆ, ಯೋಜಿಸಲಾಗುವುದು ಎಂದರು.

<><><>

ಚಾಮರಾಜನಗರ ಜಿಲ್ಲೆಯಲ್ಲಿ ರೇ ್ಮೆ ಬೆಳೆಗಾರರು ಹಾಗೂ ನೇಕಾರರನ್ನು ಪ್ರೋತ್ಸಾಹಿಸಿ, ರೇ ್ಮೆ ಉತ್ಪಾದನೆ ಹೆಚ್ಚಿಸುವ ಸಲುವಾಗಿ, ರೇ ್ಮೆ ಖಾತೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ರೇ ್ಮೆ ಕೃಷಿ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. 15 ಕೋಟಿ ರೂಪಾಯಿಗಳನ್ನು, ರೇಷ್ಮೆ ಕೃಷಿಕರ ಆರ್ಥಿಕ ಬಲವರ್ಧನೆಯ ಯೋಜನೆಗಳಿಗಾಗಿ, ಬಿಡುಗಡೆ ಮಾಡಲಾಗಿದೆ ಎಂದರು.

<><><>

ಮಾತೃ ಭಾಷೆ ಕನ್ನಡ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ, 1 ಲಕ್ಷ 32 ಸಾವಿರ ವಿದ್ಯಾರ್ಥಿಗಳು ಹಾಗೂ ಪಿ.ಯು.ಸಿ.ಯಲ್ಲಿ 62 ಸಾವಿರ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ, ವಿಸ್ತೃತ ವರದಿ ಕೇಳಿದ್ದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ. ಹಾಸನ ಜಿಲ್ಲಾಧಿಕಾರಿ ಕಚೇರಿಯಲ್ಲಿ, ಮಾತನಾಡಿದ ಅವರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 36 ಗಂಟೆಗಳಲ್ಲಿ ಕನ್ನಡ ಕಲಿಯುವ, ಹೊಸ ಪಠ್ಯಕ್ರಮ ರೂಪಿಸಿದೆ ಎಂದರು.

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ, 'ಮಂಗಳ ಗ್ರಹದ ಮೇಲೆ ನನ್ನನ್ನು ಹಾರಿಸು' ಎಂಬ ಧ್ಯೇಯದೊಂದಿಗೆ ಆಯೋಜಿಸಿರುವ, ವಿಶೇಷ ರಾಷ್ಟ್ರೀಯ ಸ್ಪರ್ಧೆಯಲ್ಲಿ, ಧಾರವಾಡದ, ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪಲ್ ಐಟಿ ವಿದ್ಯಾರ್ಥಿಗಳ ತಂಡ, ಅಂತಿಮವಾಗಿ ಆಯ್ಕೆಯಾದ, ಒಟ್ಟು 37 ತಂಡಗಳ ಪೈಕಿ ಒಂದಾಗಿದೆ. ದೇಶಾದ್ಯಂತ ಸಾವಿರದ ಏಳು ನೂರು ತಂಡಗಳು, ಈ ಸ್ಪರ್ಧೆಯಲ್ಲಿ ಪ್ರಥಮ ಹಂತದಲ್ಲಿ ಭಾಗವಹಿಸಿದ್ದವು.

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಟ್ರಿಪಲ್ ಐಟಿ ನಿರ್ದೇಶಕ ಪ್ರೊಫೆಸರ್ ಮಹದೇವ ಪ್ರಸನ್ನ.

<><><>

ಪ್ರೊ. ಮಹದೇವ ಪ್ರಸನ್ನ ಧ್ವನಿ 38 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ದ.ರಾ.ಬೇಂದ್ರೆ ಅವರ ನಿವಾಸ, 'ಶ್ರೀ ಮಾತಾ'ದ ರೇಖಾಚಿತ್ರಿತ ಶಾಶ್ವತ ರದ್ದತಿ ಮುದ್ರೆ, ವಿರಳ ಮತ್ತು ಅನನ್ಯ ಎಂದು, ಕರ್ನಾಟಕ ವೃತ್ತದ, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರಕುಮಾರ ಹೇಳಿದ್ದಾರೆ. ಧಾರವಾಡದ ಸಾಧನಕೇರಿಯ, ಬೇಂದ್ರೆ ಭವನದಲ್ಲಿ, ರೇಖಾಚಿತ್ರ ಶಾಶ್ವತ ರದ್ದತಿ ಅಂಚೆ ಮೊಹರನ್ನು ಬಿಡುಗಡೆಗೊಳಿಸಿ, ಮಾತನಾಡಿದರು. ಧಾರವಾಡ ವೃತ್ತದಿಂದ, ಆದಿಕವಿ ಪಂಪ, ಉಣಕಲ್ ಹಾಗೂ ದ.ರಾ.ಬೇಂದ್ರೆ ನಿವಾಸದ, ಮೂರು ರೇಖಾಚಿತ್ರಿತ ರದ್ದತಿ ಮೊಹರುಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದರು. ಭಾರತೀಯ ಅಂಚೆ ಇಲಾಖೆ, ಕರ್ನಾಟಕ ವೃತ್ತದಿಂದ. ಈ ವರೆಗೆ ಒಟ್ಟು 88 ಪ್ರಮುಖ ವ್ಯಕ್ತಿ, ಸ್ಮಾರಕಗಳ ಶಾಶ್ವತ ರೇಖಾಚಿತ್ರಿತ ರದ್ದತಿ ಮುದ್ರೆ, **(Permanent Pictorial Cancellations–PPCs)** ಬಿಡುಗಡೆಯಾಗಿವೆ, ಎಂದರು.

<><><>

ಉತ್ತರ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಕರ್ನಲ್ ಸುಶೀಲಕುಮಾರ, ಬೇಂದ್ರೆ ಟ್ರಸ್ಟ್ ಅಧ್ಯಕ್ಷ ಡಿ.ಎಂ. ಹಿರೇಮಠ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

108 ಆಂಬ್ಯುಲೆನ್ಸ್ ಸೇವೆಯನ್ನು, ಇನ್ನು ಮುಂದೆ, ಸರ್ಕಾರವೇ ನಿರ್ವಹಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಚಾಮರಾಜನಗರದಲ್ಲಿ ಪ್ರಾಯೋಗಿಕ ಕಾರ್ಯಾಚರಣೆ ಯಶಸ್ವಿಯಾಗಿದ್ದು, ಜೂನ್ ತಿಂಗಳಲ್ಲಿ ರಾಜ್ಯಾದ್ಯಂತ 108 ಆಂಬ್ಯುಲೆನ್ಸ್ ಸೇವೆ, ಆರೋಗ್ಯ ಇಲಾಖೆಯ ನಿರ್ವಹಣಾ ವ್ಯಾಪ್ತಿಗೆ ಬರಲಿದೆ ಎಂದರು.

<><><>

ಸಚಿವ ದಿನೇಶ ಗುಂಡೂರಾವ ಧ್ವನಿ 28 ಸೆಕೆಂದುಗಳು

<><><>

ಧಾರವಾಡ ಜಿಲ್ಲೆ, ನವಲಗುಂದ ಪಟ್ಟಣಕ್ಕೆ, ಅಂದಾಜು ಹತ್ತೂವರೇ ಕಿಲೋ ಮೀಟರ್ ಉದ್ದದ, 327 ಕೋಟಿ ರೂಪಾಯಿ ವೆಚ್ಚದ ಬೈಪಾಸ್ ರಸ್ತೆ ನಿರ್ಮಾಣಕ್ಕೆ, ಕೇಂದ್ರ ಹೆದ್ದಾರಿ ಖಾತೆ ಸಚಿವ ನಿತಿನ ಗಡ್ಕರಿ ಅನುಮತಿಸಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಬೆಣ್ಣೆಹಳ್ಳ ಹಾಗೂ ಅದನ್ನು ಸೇರುವ ಇತರ ಹೊಳೆಗಳು ಮಳೆಗಾಲದಲ್ಲಿ ಪ್ರವಾಹ ಉಂಟು ಮಾಡದಂತೆ, ನೀರು ಕೃಷಿ ಭೂಮಿ ಹಾಗೂ ಜನವಸತಿ ಪ್ರದೇಶಕ್ಕೆ ನುಗ್ಗದಂತೆ, ಹೆದ್ದಾರಿ ಪ್ರಯಾಣಿಕರಷ್ಟೇ ಅಲ್ಲದೇ ಸ್ಥಳೀಯ ನಿವಾಸಿಗಳಿಗೂ ಅನುಕೂಲವಾಗುವಂತೆ, ಬೈಪಾಸ್ ರಸ್ತೆ ನಿರ್ಮಿಸಲಾಗುವುದು ಎಂದು ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಗದಗ–ತಳಕಲ್–ವಾಡಿ ರೈಲ್ವೆ ಯೋಜನೆ ಮಾರ್ಗದ ಕಾಮಗಾರಿ, ಕೊಪಳ ಜಿಲ್ಲೆ ಕು ್ಟಗಿ ವರೆಗೆ ಪೂರ್ಣಗೊಂಡಿದ್ದು, ಇಂದು ಲೋಕಾರ್ಪಣೆಗೊಳ್ಳಲಿದೆ. ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹಾಗೂ ಸಚಿವ ಎಂ.ಬಿ.ಪಾಟೀಲ ಅವರು, ಹುಬ್ಬಳ್ಳಿಯಿಂದ ಕು ್ಟಗಿ ವರೆಗೆ ಸಂಚರಿಸುವ, ಗದಗ, ವಾಡಿ ರೈಲಿಗೆ, ಇಂದು ಬೆಳಗ್ಗೆ 10.30ಕ್ಕೆ ಕುಷ್ಟಗಿಯಲ್ಲಿ ಚಾಲನೆ ನೀಡಲಿದ್ದಾರೆ.

<><><>

ನೈಋತ್ಯ ರೇಲ್ವೆ ವಿಭಾಗದ, ಮುನಿರಾಬಾದ್, ಗಿಣಿಗೇರಾ–ರಾಯಚೂರು ನೂತನ ರೈಲು ಮಾರ್ಗ ಯೋಜನೆಯಡಿ, ಸಿಂಧನೂರು-ರಾಯಚೂರು ಮಧ್ಯದ, 81 ಕಿಲೋ ಮೀಟರ್ ನೂತನ ರೈಲು ಮಾರ್ಗದ ಶಂಕು ಸ್ಥಾಪನೆ ಇಂದು ಮಧ್ಯಾಹ್ನ 2 ಗಂಟೆಗೆ, ರಾಯಚೂರ ಜಿಲ್ಲೆ, ಸಿಂಧನೂರು ರೇಲ್ವೆ ನಿಲ್ದಾಣದಲ್ಲಿ, ಆಯೋಜಿತವಾಗಿದೆ. ಕೇಂದ್ರ ಸಚಿವ ವಿ.ಸೋಮಣ್ಣ ಹಾಗೂ ರಾಜ್ಯ ಸಚಿವ ಸಂಪುಟದ ಹಲವು ಸಚಿವರು, ಹಿರಿಯ ರೇಲ್ವೆ ಅಧಿಕಾರಿಗಳು ಭಾಗವಹಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ನ್ಯಾಯಮೂರ್ತಿ ಭೂ ೕಣ್ ರಾಮಕೃ ್ಣ ಗವಾಯಿ, ಸರ್ವೋಚ್ಚ ನ್ಯಾಯಾಲಯದ 52ನೇ ಮುಖ್ಯ ನ್ಯಾಯಮೂರ್ತಿಯಾಗಿ, ರಾಷ್ಟ್ರಪತಿಯವರಿಂದ ಪ್ರಮಾಣ ವಚನ ಸ್ವೀಕರಿಸಿದರು.

<><><>

ಕೇರಳ ಕೇಡರ್‌ನ ನಿವೃತ್ತ ಐ.ಎ.ಎಸ್. ಅಧಿಕಾರಿ, ಅಜಯ್ ಕುಮಾರ, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

<><><>

ಬಿಹಾರದಲ್ಲಿ ಆಯೋಜಿತ, ಖೇಲೋ ಇಂಡಿಯಾ ಯುವ ಕ್ರೀಡಾಕೂಟದಲ್ಲಿ, ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಇಂದು ಖೇಲೋ ಇಂಡಿಯಾ ಕ್ರೀಡಾಕೂಟ ಸಮಾರೋಪಗೊಳ್ಳಲಿದೆ.

<><><>

ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, ಕ್ರೀಡಾ ಮೀಸಲಾತಿ ಅಡಿ, ನಾಳೆಯಿಂದ 20ರ ವರೆಗೆ, ವಿದ್ಯಾರ್ಥಿಗಳ ದಾಖಲೆ ಪರಿಶೀಲನೆ, ಬೆಂಗಳೂರಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ನಡೆಯಲಿದೆ.

<><><>

ಚಿಕ್ಕಬಳ್ಳಾಪುರದ, ಎಚ್.ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ, ಎನ್.ಹೆಚ್.ಶಿವಶಂಕರರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ.

<><><>

ದಿವಂಗತ ಗುದ್ಲೆಪ್ಪ ಹಳ್ಳಿಕೇರಿ, ಅವರ ಪುಣ್ಯತಿಥಿ ಹಿನ್ನೆಲೆ, ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆ ಆವರಣದ ಪ್ರತಿಮೆಗೆ, ಇಂದು ಬೆಳಗ್ಗೆ 10:30ಕ್ಕೆ, ಗೌರವಾರ್ಪಣೆ ಕಾರ್ಯಕ್ರಮ ಆಯೋಜಿತವಾಗಿದೆ.

<><><>

ಚಿತ್ರದುರ್ಗ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ, ಇಂದು ಸಂಜೆ 4ಕ್ಕೆ "ಆಪರೇ ೕನ್ ಅಭ್ಯಾಸ್" ಅಣಕು ಕಾರ್ಯಾಚರಣೆ ಆಯೋಜಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಅಂತರ್ಜಲ ಸ್ಥಿರಾಸ್ತಿ; ಜಲ ಚತುರ ಕೃಷಿ ಇಂದಿನ ಆದ್ಯತೆ – ಐ.ಸಿ.ಎ.ಆರ್. ನಿರ್ದೇಶಕ, ಚಿ.ಶ್ರೀನಿವಾಸ ರಾವ್.

- ಕನ್ನಡ ಭಾಷೆ ಪರೀಕ್ಷೆ; 10ನೇ ತರಗತಿ ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳು ಅನುತ್ತೀರ್ಣ; ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ, ಪರಿಶೀಲನೆ.
- ವರಕವಿ ಬೇಂದ್ರೆ ನಿವಾಸ, 'ಶ್ರೀ ಮಾತಾ'ದ, ರೇಖಾಚಿತ್ರಿತ ಶಾಶ್ವತ ಅಂಚೆ ರದ್ದತಿ ಮುದ್ರೆ, ಬಿಡುಗಡೆ.
- 108 ಆಂಬ್ಯುಲೆನ್ಸ್ ಸೇವೆ; ಜೂನ್ ತಿಂಗಳಿನಿಂದ, ರಾಜ್ಯ ಸರ್ಕಾರವೇ ನಿರ್ವಹಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>